ಕರ್ನಾಟಕ ಸರ್ಕಾರ
ಸಮಗ್ರ ಮಕ್ಕಳ ರಕ್ಷಣಾ ಯೋಜನೆ
C/o ನಿರ್ದೇಶನಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಒಂದನೇ ಮಹಡಿ, ಬಹು ಮಹಡಿಗಳ ಕಟ್ಟಡ,
ಡಾ||ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560 001, ಕರ್ನಾಟಕ
E-mail ID:icps.kar@gmail.com Phone No: 080-22879381

ಸಂಖ್ಯೆ:ಕರಾಸಮರಸೊ/ತರಬೇತಿ/POCSO S.P/21/2020-21 ದಿನಾಂಕ:30.10.2021

30.10.2021

ಅಧ್ಯಕ್ಷರು
ಮಕ್ಕಳ ಕಲ್ಯಾಣ ಸಮಿತಿ (CWC)
30 ಜಿಲ್ಲೆಗಳು.

ಮಾನ್ಯರೇ,

**ವಿಷಯ: ಮಕ್ಕಳ ಕಲ್ಯಾಣ ಸಮಿತಿಯ ಮೂಲಕ ಪೋಕ್ಸೋ ಪ್ರಕರಣದಲ್ಲಿ ಮಗು ಮತ್ತು ಕುಟುಂಬಕ್ಕೆ ಸಹಾಯ ಮಾಡಲು ತರಬೇತಿ ಪಡೆದ ಸಹಾಯಕ/ಬೆಂಬಲ ವ್ಯಕ್ತಿಗಳನ್ನು ಗೊತ್ತು ಪಡಿಸುವ ಕುರಿತು.**

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನಿಯಮ 4(8), (9), (10), (11), (12) ಪೋಕ್ಸೋ ನಿಯಮಗಳು, 2020ರಲ್ಲಿ ವ್ಯಾಖ್ಯಾನಿಸಿದಂತೆ ಬೆಂಬಲ ವ್ಯಕ್ತಿಗಳನ್ನು ಕರ್ನಾಟಕದ ಎಲ್ಲಾ ಜಿಲ್ಲೆಗಳಿಂದ ಆಯ್ಕೆ ಮಾಡಲಾಗಿದ್ದು ಹಾಗೂ ಸೂಕ್ತ ತರಬೇತಿಯನ್ನು ನೀಡಲಾಗಿದೆ. ಪೋಕ್ಸೋ ಕಾಯ್ದೆಯಡಿಯಲ್ಲಿ ಸಂತ್ರಸ್ತರಾದ ಮಗು ಹಾಗೂ ಮಗುವಿನ ಕುಟುಂಬಕ್ಕೆ ತನಿಖೆ, ಪುನರ್ವಸತಿ ಮತ್ತು ವಿಚಾರಣೆಯ ಪ್ರಕ್ರಿಯೆಯ ಸಂದರ್ಭದಲ್ಲಿ ಸಹಾಯ ಮಾಡಲು ಮಕ್ಕಳ ಕಲ್ಯಾಣ ಸಮಿತಿಗಳು ನಿಗದಿ ಪಡಿಸಬಹುದಾದ ಬೆಂಬಲ ವ್ಯಕ್ತಿಗಳ ಸಮೂಹವನ್ನು ಪ್ರತೀ ಜಿಲ್ಲೆಗಳಲ್ಲಿ ಸಜ್ಜುಗೊಳಿಸುವುದು ಈ ತರಬೇತಿಯ ಉದ್ದೇಶವಾಗಿತ್ತು.

ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ, ಯುನಿಸೆಫ್ ಹಾಗೂ ಎನ್ಫೋಲ್ಡ್ ಟ್ರಸ್ಟ್, ಬೆಂಗಳೂರು ಇವರ ಸಹಯೋಗದಲ್ಲಿ 3 ಬ್ಯಾಚ್‌ಗಳಲ್ಲಿ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ, ಅಪರಾಧಗಳು ಹಾಗೂ ಪೋಕ್ಸೋ ಕಾಯ್ದೆ ಮತ್ತು ನಿಯಮಗಳ ಅಡಿಯಲ್ಲಿ ಶಿಕ್ಷೆಗಳು, ನಿಬಂಧನೆಗಳು, ಪುನರ್ವಸತಿ, ಬೆಂಬಲ ವ್ಯಕ್ತಿಗಳ ಪಾತ್ರಗಳು ಮತ್ತು ಜವಾಬ್ದಾರಿಗಳು, ಮಕ್ಕಳ ಮಾನಸಿಕ ಆರೋಗ್ಯ ಮತ್ತು ಸ್ವಯಂ ಕಾಳಜಿ, ದಾಖಲೀಕರಣ ಹಾಗೂ ಭಾಗೀದಾರರೊಂದಿಗೆ ಸಂವಹನ ಇತ್ಯಾದಿ ವಿಷಯಗಳ ಕುರಿತಂತೆ ಪರಿಣಿತ ಸಂಪನ್ಮೂಲ ವ್ಯಕ್ತಿಗಳಿಂದ ತರಬೇತಿಯನ್ನು ನೀಡಲಾಗಿದೆ.

ಪ್ರತೀ ಜಿಲ್ಲೆಗಳಲ್ಲಿ ತರಬೇತಿ ಪಡೆದ ಪೋಕ್ಸೋ ಬೆಂಬಲ/ಸಹಾಯಕ ವ್ಯಕ್ತಿಗಳ ಪಟ್ಟಿಯನ್ನು ಅವರ ಸಂಪರ್ಕ ಸಂಖ್ಯೆಯೊಂದಿಗೆ ಲಗತ್ತಿಸಿದೆ. ಪೋಕ್ಸೋ ಪ್ರಕರಣಗಳಲ್ಲಿ ಸದರಿ ಬೆಂಬಲ ವ್ಯಕ್ತಿಗಳನ್ನು ಗೊತ್ತು ಪಡಿಸುವ ಮೂಲಕ ಮಗು ಹಾಗು ಮಗುವಿನ ಕುಟುಂಬಗಳಿಗೆ ಸಹಾಯ ಹಾಗೂ ಬೆಂಬಲ ನೀಡಲು ಸಹಕಾರಿಯಾಗುತ್ತದೆ. ಈ ಹಂತದಲ್ಲಿ ನಿಮ್ಮ ಜಿಲ್ಲೆಯಲ್ಲಿ ಪ್ರತೀ ಪೋಕ್ಸೋ ಪ್ರಕರಣಕ್ಕೆ ಒಬ್ಬ ಬೆಂಬಲ ವ್ಯಕ್ತಿಯನ್ನು ನಿಯೋಜಿಸಲು ಸಾದ್ಯವಾಗದಿದ್ದರೂ, ಒಬ್ಬ ಪೋಕ್ಸೊ ಬೆಂಬಲ ವ್ಯಕ್ತಿಗೆ ಎರಡು ಪ್ರಕರಣಗಳಲ್ಲಿ ಗೊತ್ತು ಪಡಿಸಬಹುದಾಗಿದೆ. ಪೋಕ್ಸೋ ಕಾಯ್ದೆಯಡಿಯಲ್ಲಿ ದಾಖಲಾದ ಪ್ರಕರಣದ ತೀವ್ರತೆ, ಜಟಿಲತೆ, ಮಗು ಮತ್ತು ಮಗುವಿನ ಕುಟುಂಬ ಅಶಕ್ತವಾಗಿದ್ದರೆ ಅಥವಾ ಪ್ರಕರಣ ಹಿಂದೆಗೆದುಕೊಳ್ಳುವಂತೆ ಬೆದರಿಕೆಯನ್ನು ಎದುರಿಸುತ್ತಿದ್ದಂತಹ ಸಂದರ್ಭಗಳನ್ನು ಗಮನಿಸಿ ಸೂಕ್ತ ಬೆಂಬಲ ವ್ಯಕ್ತಿಯನ್ನು ಗೊತ್ತುಪಡಿಸುವುದು.



Scanned with CamScanner

**ಪೋಕ್ಸೋ ಬೆಂಬಲ ವ್ಯಕ್ತಿಗಳನ್ನು ಗೊತ್ತು ಮಾಡುವ ಪ್ರಕ್ರಿಯೆಗಳು:**

- ಬೆಂಬಲ ವ್ಯಕ್ತಿಗಳ ಕೌಶಲ್ಯ, ಸಾಮಾರ್ಥ್ಯಗಳನ್ನು ತಿಳಿದುಕೊಳ್ಳಲು ತಮ್ಮ ಜಿಲ್ಲೆಗಳಲ್ಲಿ ತರಬೇತಿ ಪಡೆದ ಬೆಂಬಲ ವ್ಯಕ್ತಿಗಳೊಂದಿಗೆ ಸಭೆ ನಡೆಸುವುದು.
- ಬೆಂಬಲ ವ್ಯಕ್ತಿಗಳ ವಹಿ ರಚಿಸಿ ಜಿಲ್ಲೆಯ ಎಲ್ಲಾ ಬೆಂಬಲ ವ್ಯಕ್ತಿಗಳ ಮಾಹಿತಿ ಹಾಗೂ ಅವರಿಗೆ ನಿಯೋಜಿಸಲಾದ ಪೋಕ್ಸೋ ಪ್ರಕರಣಗಳ ಪ್ರಗತಿಯನ್ನು ದಾಖಲಿಸುವುದು.
- ಮಕ್ಕಳ ಕಲ್ಯಾಣ ಸಮಿತಿಯ ಲೆಟರ್ ಹೆಡ್‌ನಲ್ಲಿ ನಿಗದಿತ ನಮೂನೆಯಲ್ಲಿ ಪ್ರತೀ ಪ್ರಕರಣಕ್ಕೆ ಬೆಂಬಲ ವ್ಯಕ್ತಿಗಳನ್ನು ನಿಗದಿಪಡಿಸುವುದು.
- ಸೂಚಿಸಿದ ನಮೂನೆಯಲ್ಲಿ ಪ್ರತಿ ಬೆಂಬಲ ವ್ಯಕ್ತಿಗಳಿಂದ ಪ್ರತೀ ಪ್ರಕರಣಗಳ ಕುರಿತು ಮಾಸಿಕ ವರದಿಯನ್ನು ಪಡೆದುಕೊಳ್ಳುವುದು.
- ಪೋಕ್ಸೋ ಪ್ರಕರಣಗಳ ಕುರಿತು ಚರ್ಚಿಸಲು ಜಿಲ್ಲಾ ಮಟ್ಟದ ಭಾಗೀದಾರರಾದ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧಿಕಾರಿಗಳು, ವಿಶೇಷ ಮಕ್ಕಳ ಪೋಲಿಸ್ ಘಟಕದ ಅಧಿಕಾರಿಗಳು, ಮಕ್ಕಳ ಸಹಾಯವಾಣಿ ಸಿಬ್ಬಂದಿಗಳು, ಸರ್ಕಾರೇತರ ಸೇವಾ ಸಂಸ್ಥೆಗಳ ಪ್ರತಿನಿಧಿಗಳು, ಪೋಕ್ಸೋ ಬೆಂಬಲ/ಸಹಾಯಕ ವ್ಯಕ್ತಿಗಳು ಇವರೊಂದಿಗೆ ತ್ರೈಮಾಸಿಕ ಸಭೆಗಳನ್ನು ನಡೆಸುವುದು.

ಈ ತರಬೇತಿ ಪಡೆದಿರುವ ಪೋಕ್ಸೋ ಬೆಂಬಲ/ಸಹಾಯಕ ವ್ಯಕ್ತಿಗಳಿಗೆ ಮಾರ್ಗದರ್ಶನ ಹಾಗೂ ಸಹಾಯ ಮಾಡುವ ಉದ್ದೇಶದಿಂದ ರಾಜ್ಯ ಮಟ್ಟದಲ್ಲಿ ಪೋಕ್ಸೋ ಮಾರ್ಗದರ್ಶಕರನ್ನು ಗುರುತಿಸುವ ಹಾಗೂ ಮಾರ್ಗದರ್ಶಕರ ಗುಂಪನ್ನು ರಚಿಸುವ ಪ್ರಕ್ರಿಯೆಯೂ ಪ್ರಗತಿಯಲ್ಲಿದ್ದು, ಸದರಿ ಪೋಕ್ಸೋ ಮಾರ್ಗದರ್ಶಕರ ಗುಂಪಿನ ವಿವರಗಳನ್ನು ಮುಂಬರುವ ದಿನಗಳಲ್ಲಿ ಕಳುಹಿಸಲಾಗುವುದು. ಪೋಕ್ಸೋ ನಿಯಮಗಳು 2020ರ ಅಡಿಯಲ್ಲಿ ಬೆಂಬಲ ವ್ಯಕ್ತಿಗಳ ಕುರಿತ ನಿಬಂದನೆಗಳನ್ನು ಅನುಬಂಧ 1ರಲ್ಲಿ ಲಗತ್ತಿಸಿದೆ.

ಮಕ್ಕಳ ಕಲ್ಯಾಣ ಸಮಿತಿಯ ಮೂಲಕ ಪೋಕ್ಸೋ ಕಾಯ್ದೆ–2012 ಮತ್ತು ನಿಯಮಗಳು–2020ರಲ್ಲಿ ಪ್ರಕರಣ ದಾಖಲಿಸುವ ಮಗು ಮತ್ತು ಕುಟುಂಬಕ್ಕೆ ಸಹಾಯ ಮಾಡಲು ಬೆಂಬಲ ವ್ಯಕ್ತಿಗಳನ್ನು ನಿಗದಿಪಡಿಸುವ ಪ್ರಕ್ರಿಯೆಗೆ ಮಕ್ಕಳ ರಕ್ಷಣಾ ನಿರ್ದೇಶನಾಲಯವು ಪ್ರಕರಣಕ್ಕೆ ರೂ.1,000/–ರಂತೆ ಸಂಭಾವ್ಯ ಸಹಕಾರವನ್ನು ನೀಡಲಿದ್ದು, ಸದರಿ ಬೆಂಬಲ ವ್ಯಕ್ತಿಗಳನ್ನು ಪೋಕ್ಸೋ ಪ್ರಕರಣಗಳಲ್ಲಿ ನಿಗದಿಪಡಿಸುವ ಪ್ರಕ್ರಿಯೆಯನ್ನು ಯಶಸ್ವಿಗೊಳಿಸುವಲ್ಲಿ ರಾಜ್ಯದ ಎಲ್ಲಾ ಮಕ್ಕಳ ಕಲ್ಯಾಣ ಸಮಿತಿಗಳು ಸಹಕಾರವನ್ನು ನೀಡುವಂತೆ ಕೋರಿದೆ.

ತಮ್ಮ ವಿಶ್ವಾಸಿ

30.10.2021

ನಿರ್ದೇಶಕರು

ಮಕ್ಕಳ ರಕ್ಷಣಾ ನಿರ್ದೇಶನಾಲಯ

ಬೆಂಗಳೂರು

**ಸೂಚನೆ:** ತಮ್ಮ ಜಿಲ್ಲೆಗಳಲ್ಲಿ ಪೋಕ್ಸೊ ಬೆಂಬಲ ವ್ಯಕ್ತಿಗಳ ಕಾರ್ಯ ಚಟುವಟಿಕೆಗಳ ಬಗ್ಗೆ ಯಾವುದೇ ಸಮಸ್ಯೆ, ಗೊಂದಲಗಳಿದ್ದಲ್ಲಿ ಸಲಹೆ ಹಾಗು ಮಾರ್ಗದರ್ಶನಕ್ಕಾಗಿ ನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯ ಅಥವಾ ಎನ್ಫೋಲ್ಡ್ ಟ್ರಸ್ಟ್, ಬೆಂಗಳೂರು ಇಲ್ಲಿನ ಎಂ. ಸುಜಾ ಸುಕುಮಾರನ್ ಅಥವಾ ಖುಷಿ ಕುಶಾಲಪ್ಪರವನ್ನು ಸಂಪರ್ಕಿಸಬಹುದು.

Scanned with CamScanner

**ಪ್ರತಿಗಳು:**

- ನೋಡಲ್ ಅಧಿಕಾರಿ, ಕರ್ನಾಟಕ ರಾಜ್ಯ ಪೋಲಿಸ್
- ನೋಡಲ್ ಅಧಿಕಾರಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
- ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ
- ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳು, ಎಲ್ಲಾ ಜಿಲ್ಲೆಗಳು
- ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಎಲ್ಲಾ ಜಿಲ್ಲೆಗಳು
- ಸಾರ್ವಜನಿಕ ವ್ಯಾಜ್ಯ ನಿರ್ವಹಣಾಧಿಕಾರಿ
- ಪೋಕ್ಸೋ ವಿಶೇಷ ನ್ಯಾಯಲಯ, ಎಲ್ಲಾ ಜಿಲ್ಲೆಗಳು

**ಲಗತ್ತು:**

- ತರಬೇತಿಯಲ್ಲಿ ಭಾಗವಹಿಸಿದ ಪೋಕ್ಸೋ ಸಹಾಯಕ/ಬೆಂಬಲ (Support Persons) ವ್ಯಕ್ತಿಗಳ ಪಟ್ಟಿ
- ಅನುಬಂಧ 1 ಪೋಕ್ಸೋ ನಿಯಮಗಳು 2020ರ ಅಡಿಯಲ್ಲಿ ಬೆಂಬಲ ವ್ಯಕ್ತಿಗಳ ಕುರಿ... ನಿಬಂದನೆಗಳು

Scanned with CamScanner